ಕರ್ನಾಟಕ ವಿಧಾನ ಸಭೆ

ಗುರುವಾರ, 11ನೇ ಮಾರ್ಚ್ 2010ರಂದು ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11 ಗಂಟೆ 10 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು ಶ್ರೀ ಕೆ.ಜಿ.ಬೋಪಯ್ಯರವರು ಪೀಠವನ್ನು ಅಲಂಕರಿಸಿದ್ದರು.

1. ಪ್ರಶ್ನೋತ್ತರಗಳು :

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು :

ಅಧ್ಯಕ್ಷರು : ಹೆಚ್.ಪಿ.ಮಂಜುನಾಥ್‌ರವರೆ, ನಿಮ್ಮ ಪ್ರಶ್ನೆ ಸಂಖ್ಯೆ 736 ಕ್ಕೆ 18ನೇ ತಾರೀಖು ಉತ್ತರ ಕೊಡುತ್ತಾರಂತೆ.

ಶ್ರೀ ಟಿ.ಬಿ.ಜಯಚಂದ್ರ : ಮಂಜುನಾಥ್‌ರವರು ದೊಡ್ಡ ಪ್ರಶ್ನೆಯನ್ನೇನು ಕೇಳಿಲ್ಲ. ಇಂಥ ಪ್ರಶ್ನೆಗಳಿಗೆಲ್ಲ ಟೈಂ ತೆಗೆದುಕೊಳ್ಳುತ್ತಾರೆಂದರೆ ಇದು ಏನೆಂದು ನನಗೆ ಅರ್ಥವಾಗುವುದಿಲ್ಲ. ಮಂತ್ರಿಗಳು ಯುವಕರು, active ಆಗಿದ್ದಾರೆ. ಆದರೂ ಏಕೆ ಉತ್ತರಗಳು ಬರುವುದಿಲ್ಲ.

ಅಧ್ಯಕ್ಷರು : ಅವರು ತಮ್ಮ ಇಲಾಖೆಯನ್ನು ಬಿಗಿ ಮಾಡಬೇಕು.

ಶ್ರೀ ಟಿ.ಬಿ. ಜಯಚಂದ್ರ : ಈಗ ಅಧ್ಯಕ್ಷರಿಂದಲೇ ಆದೇಶವಾಗಿದೆ, ನೀವು ನಿಮ್ಮ ಇಲಾಖೆಯನ್ನು ಬಿಗಿ ಮಾಡಬೇಕು.

ವಿಷಯ : ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಿರುವ ಬಗ್ಗೆ

47 (391) ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ (ಕುಷ್ಟಗಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2005–06 ಹಾಗೂ 2006–07 ನೇ ಸಾಲಿನಲ್ಲಿ ಸರ್ಕಾರದಿಂದ ರಾಜ್ಯದಲ್ಲಿ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಲಾಗಿದೆಯೇ; ಮಂಜೂರಾಗಿದ್ದಲ್ಲಿ, ಎಷ್ಟು ಹಾಗೂ ಎಲ್ಲಿ ಎಂಬುದರ ಬಗ್ಗೆ ವಿವರ ನೀಡುವುದು;

ಆ) ಈ ಪೈಕಿ ಎಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ; ಅವು ಯಾವುವು;

ಇ) ಯಾವ ಯಾವ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಪ್ರಾರಂಭವಾಗಿಲ್ಲ; ಅದಕ್ಕೆ ಕಾರಣಗಳೇನು;

ಈ) ಈ ಪೈಕಿ ರಾಯಚೂರು ಜಿಲ್ಲೆಯ ಲಿಂಗಸಗೂರು ತಾಲ್ಲೂಕಿನ ಬಯ್ಯಾಪುರ ಗ್ರಾಮಕ್ಕೆ ಮಂಜೂರಾದ ಪ್ರಾಥಮಿಕ ಆರೋಗ್ಯ ಕೇಂದ್ರ ಪ್ರಾರಂಭವಾಗದಿರಲು ಕಾರಣ ಏನು;

ಉ) ಈ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಸ್ವಂತ ಕಟ್ಟಡಗಳನ್ನು ನಿರ್ಮಿಸಲು ಸರ್ಕಾರವು ತೆಗೆದುಕೊಂಡ ಕ್ರಮಗಳೇನು?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಗುಲ್ಬರ್ಗಾ ಜಿಲ್ಲೆಯ ಜೇವರ್ಗಿ ತಾಲ್ಲೂಕಿನ 1) ಕೂಡಿದರ್ಗಾ 2) ಗಂವಾರ 3) ಜೀರಟಗಿ ಈ 2 ಪ್ರಾಥಮಿಕ ಆರೋಗ್ಯ ಘಟಕಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನಾಗಿ 2005–06 ನೇ ಸಾಲಿನಲ್ಲಿ ಮೇಲ್ದರ್ಜೆಗೇರಿಸಲಾಗಿದೆ. 2006–07ರಲ್ಲಿ ಯಾವುದೇ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಿರುವುದಿಲ್ಲ.

ಆ) ಗುಲ್ಬರ್ಗಾ ಜಿಲ್ಲೆಯ ಜೇವರ್ಗಿ ತಾಲ್ಲೂಕಿನ

1) ಕೂಡಿದರ್ಗಾ 2) ಗಂವಾರ 3) ಜೀರಟಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ.

ಇ) ಉದ್ಭವಿಸುವುದಿಲ್ಲ.

ಈ) 2007–08ನೇ ಸಾಲಿನಲ್ಲಿ ದಿನಾಂಕ: 4–10–2007ರ ಸರ್ಕಾರಿ ಆದೇಶದಲ್ಲಿ ಒಟ್ಟು 200 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ರಾಜ್ಯಾದ್ಯಂತ ಮಂಜೂರು ಮಾಡಲಾಗಿತ್ತು. ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಪ್ರಾರಂಭ ಮಾಡಲು ಗ್ರಾಮಸ್ಥರು ರೂ. 1 ಲಕ್ಷ ವಂತಿಗೆ ಮತ್ತು 2 ಎಕರೆ ಜಮೀನು ಹಾಗೂ ತಾತ್ಕಾಲಿಕ ಕಟ್ಟಡವನ್ನು ಉಚಿತವಾಗಿ ಒಂದು ವರ್ಷದೊಳಗೆ ನೀಡಬೇಕೆಂದು ನಿಬಂಧನೆ ವಿಧಿಸಲಾಗಿತ್ತು. ನಂತರ, 3 ತಿಂಗಳ ಕಾಲಾವಕಾಶವನ್ನು ಸಹ ವಿಸ್ತರಿಸಲಾಗಿತ್ತು. ಕಾಲಾವಕಾಶ ವಿಸ್ತರಿಸಿದ ಅವಧಿಯಲ್ಲಿ ರಾಯಚೂರು ಜಿಲ್ಲೆಯ ಲಿಂಗಸಗೂರು ತಾಲ್ಲೂಕಿನ ಬಯ್ಯಾಪುರ ಗ್ರಾಮಸ್ಥರು ನಿಬಂಧನೆಗಳನ್ನು ಪೂರೈಸಿದ್ದು, ಸದರಿ ಸ್ಥಳದಲ್ಲಿ

ಪ್ರಾಥಮಿಕ ಆರೋಗ್ಯ ಕೇಂದ್ರ ಪ್ರಾರಂಭಿಸಲು ಅನುಮತಿಯನ್ನು ನೀಡುವ ಬಗ್ಗೆ ಪರಿಶೀಲನೆಯಲ್ಲಿದೆ.

ಊ) ರಾಜ್ಯಾದ್ಯಂತ ಒಟ್ಟು 2193 ಪ್ರಾಥಮಿಕ ಆರೋಗ್ಯ ಕೇಂದ್ರಗಳು (2007-08ನೇ ಸಾಲಿನಲ್ಲಿ) ಮಂಜೂರಾದ 200 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಹೊರತುಪಡಿಸಿ) ಕಾರ್ಯನಿರ್ವಹಿಸುತ್ತಿದ್ದು, ಆ ಪೈಕಿ 677 ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಸ್ವಂತ ಕಟ್ಟಡ ಇರುವುದಿಲ್ಲ. ಹಣಕಾಸಿನ ಲಭ್ಯತೆ ಹಾಗೂ ನಿವೇಶನ ಲಭ್ಯತೆಯನ್ನು ಆಧರಿಸಿ ಹಂತ-ಹಂತವಾಗಿ ಸ್ವಂತ ಕಟ್ಟಡಗಳನ್ನು ಕಟ್ಟಲು ಕ್ರಮವಹಿಸಬೇಕಿದೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ (ಅಮರೇಗೌಡ ಲಿಂಗನಗೌಡ ಬಯ್ಯಾಪುರರವರ ಪರವಾಗಿ) : ಮಾನ್ಯ ಅಧ್ಯಕ್ಷರೆ, 2005-06 ಹಾಗೂ 2006-07ನೇ ಸಾಲಿನಲ್ಲಿ ರಾಜ್ಯದಲ್ಲಿ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಲಾಗಿದೆಯೇ? ಎಷ್ಟು ಮಾಡಿದ್ದೀರಿ ಎನ್ನುವ ಪ್ರಶ್ನೆಯನ್ನು ಕೇಳಿದ್ದೇವೆ. 2006-07ರಲ್ಲಿ ಯಾವುದೇ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಿರುವುದಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಯಾವ ಯಾವ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಪ್ರಾರಂಭವಾಗಿಲ್ಲ ಮತ್ತು ಅದಕ್ಕೆ ಕಾರಣಗಳೇನು ಎನ್ನುವ ಪ್ರಶ್ನೆಗೆ ಉದ್ಭವಿಸುವುದಿಲ್ಲ ಎಂದು ಹೇಳಿದ್ದಾರೆ. 2007-08ನೇ ಸಾಲಿನಲ್ಲಿ ಒಟ್ಟು 200 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ರಾಜ್ಯಾದ್ಯಂತ ಮಂಜೂರು ಮಾಡಲಾಗಿತ್ತು, ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಪ್ರಾರಂಭ ಮಾಡಲು 1 ಲಕ್ಷ ರೂಪಾಯಿಗಳ ವಂತಿಗೆ ಮತ್ತು 2 ಎಕರೆ ಜಮೀನನ್ನು ಒಂದು ವರ್ಷದೊಳಗೆ ನೀಡಬೇಕೆಂದು ಒಂದು ನಿಬಂಧನೆ ಹಾಕಿದ್ದರು. ತಾವೇನು ನಿಬಂಧನೆ ಹಾಕಿದ್ದಿರಿ ಅದರಂತೆ ಲಿಂಗಸೂರಿನ ಸ್ಥಳೀಯರು ನಿಬಂಧನೆಗಳನ್ನು ಪೂರೈಸಿದ್ದಾರೆ. ಅದಕ್ಕಾಗಿ, ನಾನು ಮಾನ್ಯ ಆರೋಗ್ಯ ಮಂತ್ರಿಗಳನ್ನು ವಿನಂತಿ ಮಾಡಿಕೊಳ್ಳುತ್ತೇನೆ, ಅದು ಬಹಳ ಹಿಂದುಳಿದಂಥ ಪ್ರದೇಶ ಮತ್ತು ಅಮರೇಗೌಡರ ಸ್ವಂತ ಊರು. ಸಚಿವರಾದ ಶ್ರೀರಾಮುಲುರವರು ನಮ್ಮ ಭಾಗದವರಾಗಿರುವುದರಿಂದ ಇದಕ್ಕೆ ಒತ್ತನ್ನು ಕೊಡುತ್ತಾರೆ ಮತ್ತು ಈ ಆಸ್ಪತ್ರೆಯನ್ನು ಪ್ರಾರಂಭ ಮಾಡಲು ಅವರು ಸೂಚನೆಯನ್ನು ಕೊಡುವರೇ ಎಂದು ನಾನು ತಮ್ಮ ಮೂಲಕ ಅವರನ್ನು ಕೇಳಲಿಕ್ಕೆ ಬಯಸುತ್ತೇನೆ.

ಶ್ರೀ ಬಿ. ಶ್ರೀರಾಮುಲು : ಮಾನ್ಯ ಅಧ್ಯಕ್ಷರೆ, 2007–08ನೇ ಸಾಲಿನಲ್ಲಿ 200 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮಂಜೂರಾಗಿದ್ದವು. ಇದನ್ನು ಪ್ರಾರಂಭ ಮಾಡಲು 1 ಲಕ್ಷ ರೂಪಾಯಿ ವಂತಿಗೆ ಮತ್ತು 2 ಎಕರೆ ಜಮೀನನ್ನು ಕೊಡಬೇಕು. ಕೆಲವರು ಕೊಟ್ಟಿದ್ದಾರೆ, ಕೆಲವರು ಕೊಟ್ಟಿಲ್ಲ. ಹಾಗಾಗಿ ಇನ್ನೂ ಮೂರು ತಿಂಗಳ ಕಾಲಾವಕಾಶವನ್ನು ಕೊಟ್ಟಿದ್ದೇವೆ. ಬಯ್ಯಾಪುರರವರು ತಮ್ಮ ಸ್ವಂತ ಗ್ರಾಮದಲ್ಲಿ ಈಗಾಗಲೇ 2 ಎಕರೆ ಜಮೀನನ್ನು ಕೊಟ್ಟು 1 ಲಕ್ಷ ರೂಪಾಯಿಗಳ ವಂತಿಗೆಯನ್ನೂ ಕೊಟ್ಟಿದ್ದಾರೆ. ಅದನ್ನು ಆದಷ್ಟು ಬೇಗ ನಾವು ಮಂಜೂರಾತಿ ಮಾಡುತ್ತೇವೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಪ್ರಾರಂಭ ಮಾಡಲು ಹೇಳಬೇಕು.

ಶ್ರೀ ಬಿ. ಶ್ರೀರಾಮುಲು : ಮಾಡುತ್ತೇವೆ.

ಶ್ರೀ ಟಿ.ಬಿ. ಜಯಚಂದ್ರ : ಈ ಪ್ರಶ್ನೆ ಕೇವಲ ಬಯ್ಯಾಪುರರವರ ಗ್ರಾಮಕ್ಕೆ ಮಾತ್ರ ಸೀಮಿತವಾಗಿಲ್ಲ. ಇದೇ ಉತ್ತರವನ್ನು ನನ್ನ ಪ್ರಶ್ನೆಗೂ ಸಹ 2 ವರ್ಷಗಳಿಂದ ಹೇಳುತ್ತಿದ್ದೀರಿ. ಈಗ 3ನೇ ವರ್ಷಕ್ಕೆ ಕಾಲಿಡುತ್ತಿದ್ದೇವೆ. ಯಾವಾಗ ನೀವು ಮಂಜೂರು ಮಾಡುತ್ತೀರಿ? ಇದುವರೆಗೂ ನಮಗೆ ಆಸ್ಪತ್ರೆಗಳು ಮಂಜೂರಾಗಿಲ್ಲ. ಒಂದು ದಿವಸ ನೀವು ಸದನದಲ್ಲಿ ಇಲ್ಲದೇ ಇದ್ದಾಗ, ನಿಮ್ಮ ಪರವಾಗಿ ಕಾಗೇರಿಯವರು ಉತ್ತರ ಕೊಟ್ಟರು, ಆಸ್ಪತ್ರೆ ಮಂಜೂರಾಗಿದೆ, ನಾಳೆ ಆರ್ಡರ್ ಕೊಡುತ್ತೇವೆ ಎಂದು ಹೇಳಿದರು. ಅವರು ಹೀಗೆ ಹೇಳಿ ಒಂದು ವರ್ಷವಾಯಿತು, ಇದುವರೆಗೂ ಆರ್ಡರ್ ಬಂದಿಲ್ಲ. ಆ ಫೈಲ್ ಅಲ್ಲೇ ಕೊಳೆಯುತ್ತಾ ಬಿದ್ದಿದೆ, ನಾನು ಹತ್ತು ಸಾರಿ ಹೋಗಿ ಅದನ್ನು ನೋಡಿದ್ದೇನೆ. ದಯಮಾಡಿ ಅದನ್ನು ತರಿಸಿ, clear ಮಾಡುವುದನ್ನಾದರೂ ಮಾಡಿ. ಜಮೀನು ಕೊಟ್ಟಿದ್ದಾರೆ, ದುಡ್ಡು ಕಟ್ಟಿದ್ದಾರೆ, ಇನ್ನೂ ಆಸ್ಪತ್ರೆಗಳು ಪ್ರಾರಂಭವಾಗಿಲ್ಲ. ಕೆಲವು ಕಡೆ ಆಸ್ಪತ್ರೆಗಳು ಪ್ರಾರಂಭವಾಗಿದ್ದರೆ ಅಲ್ಲಿ ಮೆಡಿಸನ್‌ಗಳಿಲ್ಲ. ಏನಿದು ಅವ್ಯವಸ್ಥೆ ಎಂದು ನನಗರ್ಥವಾಗುತ್ತಿಲ್ಲ. I can understand that there was a problem in the beginning. But two years have lapsed. After two years also, you are coming with the same reply ಎಂದರೆ, what does it mean? ದಯಮಾಡಿ ಅದನ್ನು ನೀವು ನೋಡಬೇಕು.

ಒಬ್ಬ ಮಾನ್ಯ ಸದಸ್ಯರು : ಬೆಳಗಾಂ ಅಧಿವೇಶನದಲ್ಲಿ ಒಂದು ಲಕ್ಷ ರೂಪಾಯಿ ವಂತಿಗೆಯನ್ನು ತುಂಬಿಕೊಡುವುದು ಬೇಡ ಎಂದು ಹೇಳಿದರು. ಏಕೆಂದರೆ, ಇದರ ಜೊತೆಗೆ 2 ಎಕರೆ ಜಮೀನನ್ನೂ ಕೊಡಬೇಕಾಗಿದೆ.

ಹಳ್ಳಿಗಾಡಿನಲ್ಲಿ ಒಂದು ಎಕರೆ ಜಮೀನಿಗೆ 2 ರಿಂದ 4 ಲಕ್ಷ ರೂಪಾಯಿಗಳಾಗುತ್ತದೆ. ಜಮೀನನ್ನೂ ಕೊಟ್ಟು, ದುಡ್ಡನ್ನೂ ಕಟ್ಟಬೇಕೆಂದರೆ ಬಹಳ ಕಷ್ಟವಾಗುತ್ತದೆ. ಅದಕ್ಕೋಸ್ಕರ ಒಂದು ಲಕ್ಷ ರೂಪಾಯಿಗಳ ವಂತಿಗೆಯನ್ನು ಕೈಬಿಡಲು ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಮನವಿ ಮಾಡುತ್ತಿದ್ದೇನೆ.

ಅಧ್ಯಕ್ಷರು : ಆಯಿತು. ಈಗ ಮುಂದಿನ ಪ್ರಶ್ನೆ.

ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ ಯೋಜನೆ

48 (930) ಶ್ರೀ ಖಾದರ್ ಯು.ಟಿ. (ಮಂಗಳೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ (ಎನ್.ಆರ್. ಹೆಚ್.ಎಂ) ಈ ಯೋಜನೆಯಡಿ ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ, ವಿವರ ನೀಡುವುದು;

ಆ) ಈ ಯೋಜನೆಗೆ ಕೇಂದ್ರ ಸರ್ಕಾರದಿಂದ ಬಂದಿರುವ ಹಣ ಎಷ್ಟು; ಕಳೆದ 2 ವರ್ಷಗಳ: ವಿವರ ನೀಡುವುದು;

ಇ) ಈ ಯೋಜನೆಗಾಗಿ ವೆಚ್ಚ ಮಾಡಿರುವ ಹಣ ಎಷ್ಟು (ಪೂರ್ಣ ವಿವರ ನೀಡುವುದು)?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ರಾಜ್ಯದ ಎಲ್ಲಾ 30 ಜಿಲ್ಲೆಗಳಲ್ಲಿ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ ಯೋಜನೆಯಡಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. ಜಾರಿಗೊಳಿಸುತ್ತಿರುವ ಪ್ರಮುಖ ಕಾರ್ಯಕ್ರಮಗಳ ವಿವರಗಳನ್ನು ಅನುಬಂಧ– 1 ರಲ್ಲಿ ನೀಡಲಾಗಿದೆ.

ಆ) ಈ ಯೋಜನೆಗೆ ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಹಣ:–

1. 2008–09 ನೇ ಸಾಲಿನಲ್ಲಿ ರೂ. 323.72 ಕೋಟಿಗಳು
2. 2009–10ನೇ ಸಾಲಿನಲ್ಲಿ (ಫೆಬ್ರವರಿ 2010ರ ಅಂತ್ಯದವರೆಗೆ) ರೂ. 310.18 ಕೋಟಿಗಳು.